ವಶಕ್ಕೆ ಪಡೆದು ರಚನಾ ಶಾರೀರ ಕ್ರಿಯಾ, ಶರೀರ ರಚನ ಹಾಗೂ ಆಯುರ್ವೇದ ಸಿದ್ಧಾಂತ ವಿಭಾಗಗಳನ್ನು ನೂತನ ಕಟ್ಟಡದಲ್ಲಿ ಪ್ರಾರಂಭಿಸಿ ಕಟ್ಟಡವನ್ನು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಕೆ ಮಾಡಲಾಗುತ್ತಿದೆ.

ಆ) ಮಹಾವಿದ್ಯಾಲಯದ ರಚನಾ ಶಾರೀರ ಕ್ರಿಯಾ, ಶರೀರ ರಚನ ಹಾಗೂ ಆಯುರ್ವೇದ ಸಿದ್ಧಾಂತ ವಿಭಾಗಗಳನ್ನು ನೂತನ ಕಟ್ಟಡದಲ್ಲಿ ಪ್ರಾರಂಭಿಸಲಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಕೆ ಮಾಡಲಾಗುತ್ತಿದೆ.

ದುರಸ್ಥಿಗೊಂಡ ಬಸ್‌ಗಳು

832(893); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಬಿಜಾಪುರ ಜಿಲ್ಲೆಯಲ್ಲಿ ದುರಸ್ಥಿಗೊಂಡ ಬಸ್‌ಗಳ ಸಂಖ್ಯೆ ಎಷ್ಟು (ಘಟಕವಾರು ವಿವರ ನೀಡುವುದು);

ಆ) ಮುದ್ದೇಬಿಹಾಳ ಮತ್ತು ತಾಳಿಕೋಟೆ ಡಿಪೋದಲ್ಲಿ ದುರಸ್ಥಿಗೊಂಡ ಬಸ್‌ಗಳೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದಿದ್ದಲ್ಲಿ, ಹೊಸ ಬಸ್‌ಗಳನ್ನು ಒದಗಿಸುವ ಆಲೋಚನೆ ಸರ್ಕಾರದ ಮುಂದಿದೆಯೇ (ಸಂಪೂರ್ಣ ವಿವರ ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಿಜಾಪುರ ಜಿಲ್ಲೆಯ ವ್ಯಾಪ್ತಿಯ ಬಿಜಾಪುರ ವಿಭಾಗದಲ್ಲಿ 2010ರಿಂದ ಇಲ್ಲಿಯವರೆಗೆ 129 ವಾಹನಗಳು ಪ್ರಾದೇಶಿಕ ಕಾರ್ಯಗಾರದಲ್ಲಿ ಕವಚ ದುರಸ್ಥಿಯಾದ ವಾಹನಗಳಿರುತ್ತವೆ. ಘಟಕವಾರು ವಿವರಗಳು ಈ ಕೆಳಗಿನಂತಿರುತ್ತವೆ.

ಕ್ರ. ಸಂ.	ಘಟಕ	ಕವಚ ದುರಸ್ಥಿಗೊಂಡ ವಾಹನಗಳ ಸಂಖ್ಯೆ
1	ಬಿಜಾಪುರ–1	12
2	ಬಿಜಾಪುರ–2	13
3	ಸಿಂದಗಿ	30
4	ಇಂಡಿ	26
5	ತಾಳಿಕೋಟೆ	17
6	ಮುದ್ದೇಬಿಹಾಳ	17
7	ಬ.ಬಾಗೇವಾಡಿ	14
	ಒಟ್ಟು	**129**

ಆ) ಮುದ್ದೇಬಿಹಾಳ ಹಾಗೂ ತಾಳಿಕೋಟೆ ಘಟಕಗಳಲ್ಲಿ ಒಟ್ಟು ಕ್ರಮವಾಗಿ 99 ಹಾಗೂ 83 ವಾಹನಗಳಿದ್ದು, ಎರಡು ಘಟಕಗಳಲ್ಲಿ ತಲಾ 17 ದುರಸ್ಥಿಗೊಂಡ ವಾಹನಗಳಿರುತ್ತವೆ. ಬಿಜಾಪುರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪ್ರದೇಶದ ಹಳ್ಳಿಗಳ ರಸ್ತೆ ಸ್ಥಿತಿ ಸರಿಯಾಗಿಲ್ಲದೇ ಇರುವುದರಿಂದ ವಾಹನಗಳ ಕವಚವು ಶಿಥಿಲಗೊಂಡು ಕವಚದ ಸ್ಥಿತಿಗತಿ ಹಾಳಾಗುವುದರಿಂದ. ಅಂತಹ ವಾಹನಗಳನ್ನು ಗುರುತಿಸಿ ಕವಚ ದುರಸ್ಥಿ ಕೈಗೊಂಡು ವಾಹನಗಳನ್ನು ಸದೃಡಪಡಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಇದರಿಂದ ವಾಹನದ ಕಾರ್ಯಾಚರಣೆಯು ಸುಗಮವಾಗುತ್ತದೆ.

ಇ) ಪ್ರಸಕ್ತ ಸಾಲಿನಲ್ಲಿ ಬಿಜಾಪುರ ವಿಭಾಗಕ್ಕೆ ಈಗಾಗಲೇ 30 ಹೊಸ ವಾಹನಗಳನ್ನು ಒದಗಿಸಲಾಗಿದ್ದು, 105 ವಾಹನಗಳನ್ನು ಮಾರ್ಚ್–14ರ ಅಂತ್ಯದೊಳಗೆ ಒದಗಿಸಲು ಕ್ರಮ ಜರುಗಿಸಲಾಗುವುದು.